ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 549
ಸದಸ್ಯರ ಹೆಸರು : ಶ್ರೀ. ರಘುನಾಥ ರಾವ್ ಮಲ್ಕಾಪುರೆ
ಉತ್ತರಿಸುವ ದಿನಾಂಕ : 11.12.2020
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಕಳೆದ 6 ತಿಂಗಳಿನಿಂದ ಬೀದರ್ ಜಿಲ್ಲೆಯಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ವರ್ಗಾವಣೆ ಮತ್ತು ನಿಯೋಜನೆಗೊಂಡಿರುವ ಪಿಡಿಓ ಗಳ ಹೆಸರು ಸಹಿತ ವಿವರಗಳನ್ನು ನೀಡುವುದು; ಈ ಪಿಡಿಓ ಗಳು ವರ್ಗಾವಣೆ/ನಿಯೋಜನೆಗೊಂಡ ಸ್ಥಳದಲ್ಲಿ ಕಾರ್ಯ ವರದಿ ಮಾಡಿಕೊಳ್ಳುವಂತೆ ಹಿರಿಯ ಅಧಿಕಾರಿಗಳ ಸೂಚನೆ ಇದ್ದರೂ ಕಾರ್ಯ ವರದಿ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಳೆದ 6 ತಿಂಗಳಿನಿಂದ ಬೀದರ್ ಜಿಲ್ಲೆಯಲ್ಲಿ 7 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ ಮತ್ತು 13 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ನಿಯೋಜನೆ ಮಾಡಲಾಗಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. 20 ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಕಾರ್ಯವರದಿ ಮಾಡಿಕೊಂಡಿರುತ್ತಾರೆ.
(ಆ)	ಬಂದಿದ್ದಲ್ಲಿ, ಅಂತಹ ಎಷ್ಟು ಜನ ಪಿಡಿಓಗಳು ಈವರೆವಿಗೂ ಕಾರ್ಯ ವರದಿ ಮಾಡಿಕೊಂಡಿರುವುದಿಲ್ಲ; ಇದಕ್ಕೆ ಕಾರಣಗಳೇನು;	ಅನ್ವಯಿಸುವುದಿಲ್ಲ.
(ಇ)	ಈ ಪಿಡಿಓ ಗಳು ತಮ್ಮ ಸ್ಥಳಕ್ಕೆ ವರ್ಗಾವಣೆ/ನಿಯೋಜನೆಗೊಂಡವರಿಗೆ ಅಧಿಕಾರ ಹಸ್ತಾಂತರಿಸದೆ ಸದರಿ ಸ್ಥಳದಲ್ಲಿ ಮುಂದುವರೆದಿರವುದಲ್ಲದೆ, ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳ ಜೊತೆ ಶಾಮೀಲಾಗಿ ಅಕ್ರಮವಾಗಿ ಖಾತೆಯಿಂದ ಹಣ ಡ್ರಾ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಗ್ರಾಮ ಪಂಚಾಯಿತಿವಾರು ಸಂಪೂರ್ಣ ವಿವರ ನೀಡುವುದು)	ಈ ಕೆಳಕಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ವರ್ಗಾವಣೆ / ನಿಯೋಜನೆಗೊಂಡವರಿಗೆ ಅಧಿಕಾರ ಹಸ್ತಾಂತರಿಸದಿರುವುದು ಮತ್ತು ಹಣ ಡ್ರಾ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. 1) ಶ್ರೀಮತಿ. ನಿರ್ಮಲಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಬಂಗಿ ಗ್ರಾಮ ಪಂಚಾಯತಿ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ. 1. ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿದ ಕಡತಗಳು ಪ್ರಭಾರ ವಹಿಸಿರುವುದಿಲ್ಲ. 2. ಅನಧಿಕೃತವಾಗಿ ಸುಮಾರು ರೂ.11 ಲಕ್ಷ ಕಾಮಗಾರಿ ಇಲ್ಲದೇ ಪಾವತಿ ಮಾಡಿದ್ದು ಸದರಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಪರಿಶೀಲಿಸಲಾಗಿ ನಿಯಮಾನುಸಾರ ಕಾಮಗಾರಿ ನಿರ್ವಹಿಸದೇ ಲಕ್ಷಾಂತರ ರೂಪಾಯಿ ಪಾವತಿ ಮಾಡಿರುವುದು.

		2) ಶ್ರೀ. ರಮೇಶ, ಗ್ರೇಡ-2 ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಪ್ರಭಾರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ, ಮನ್ನಾಏಖೇಳ್ಳಿಗೆ ವರ್ಗವಾಗಿ ಬಂದಿರುವ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ನರೇಗಾ, ಅಂಗನವಾಡಿ ಮತ್ತು 15ನೇ ಹಣಕಾಸು ಯೋಜನೆಗೆ ಸಂಬಂಧಿಸಿದ ಹಾಗೂ ಇತರ ಕಡತಗಳು.
(ಈ)	ಈ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; ಅವರನ್ನು ಅಮಾನತ್ತುಗೊಳಸಲಾಗಿದೆಯೇ?	ಮೇಲ್ಕಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿಗೆ ನೋಟಿಸ್ ಜಾರಿ ಮಾಡಿ ವಿವರಣೆ ಪಡೆದು ತಪ್ಪಿತಸ್ಥರೆಂದು ಕಂಡು ಬಂದರೆ ಅಮಾನತ್ತು ಮಾಡಿ ನಿಯಾಮನುಸಾರ ಶಿಸ್ತು ಕ್ರಮ ಜರುಗಿಸಲಾಗುತ್ತದೆ.

ಸಂ. ಗ್ರಾಅಪ 871 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಪರಿಷತ್ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:549 ಕ್ಕೆ ಅನುಬಂಧ-1

ಬೀದರ್ ಜಿಲ್ಲೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ನಿಯೋಜನೆ ಮಾಡಿರುವ ವಿವರ.

ಕ್ರ. ಸಂ.	ನೌಕರರ ಹೆಸರು/ ಪದನಾಮ	ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತ ಹೆಸರು	ತಾತ್ಕಾಲಿಕವಾಗಿ ನಿಯೋಜನೆ ಮಾಡಿ ಆದೇಶಿಸಿದ ಸ್ಥಳ
01.	ಶ್ರೀ. ದತ್ತಾತ್ರೇಯ ತಂದೆ ಕಾಶಿನಾಥ. ಪಂ.ಅ.ಅಧಿಕಾರಿ.	ಗ್ರಾಮ ಪಂಚಾಯತ, ಬೇಳಕುಣ(ಭೊ) ತಾ: ಔರಾದ.	ಗ್ರಾಮ ಪಂಚಾಯತ, ಮದನೂರ ತಾ: ಔರಾದ.
02	ಶ್ರೀ ಜ್ಞಾನು ಆರ್ ಹೊಳ್ಕರ, ಪಂ.ಅ.ಅಧಿಕಾರಿ.	ತಾಲೂಕು ಪಂಚಾಯತ ಭಾಲ್ಕಿ	ಗ್ರಾಮ ಪಂಚಾಯತ, ವರವಟ್ಟಿ ತಾ: ಭಾಲ್ಕಿ
03.	ಶ್ರೀ ವಿಜಯಕುಮಾರ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಚಿಕ್ಲಿ(ಜೆ) ತಾ: ಔರಾದ	ಜಿಲ್ಲಾ ಪಂಚಾಯತ ಬೀದರ
04.	ಶ್ರೀ ಕಾಶಪ್ಪಾ ತಂದೆ ಗಣಪತಿ, ಪಂ.ಅ.ಅಧಿಕಾರಿ.	ಗ್ರಾಮ ಪಂಚಾಯತ, ನಾರಾಯಣಪೂರ ತಾ: ಬಸವಕಲ್ಯಾಣ	ಗ್ರಾಮ ಪಂಚಾಯತ, ಗುಂಡೂರ ತಾ: ಬಸವಕಲ್ಯಾಣ
05.	ಮಹೇಬುಬ ಪಾಶಾ, ಪಂ.ಅ.ಅಧಿಕಾರಿ.	ಗ್ರಾಮ ಪಂಚಾಯತ, ಬೇಳಕುಣಿ(ಸಿಎಚ್) ತಾ: ಔರಾದ	ಗ್ರಾಮ ಪಂಚಾಯತ, ಚಿಕ್ಲಿ(ಯು) ತಾ:ಔರಾದ
06.	ವಿಜಯಕುಮಾರ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಚಿಕ್ಲಿ(ಯು) ತಾ:ಔರಾದ	ಗ್ರಾಮ ಪಂಚಾಯತ, ಬೇಳಕುಣಿ(ಸಿ.ಹೆಚ್) ತಾ:ಔರಾದ
07.	ಗೀತಾ ರೆಡ್ಡಿ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಮನ್ನಳ್ಳಿ ತಾ: ಬೀದರ	ಗ್ರಾಮ ಪಂಚಾಯತ, ಜನವಾಡ ತಾ: ಬೀದರ
08.	ಸವೀತಾ ಹಿರೇಮಠ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಜನವಾಡ ತಾ: ಬೀದರ	ಗ್ರಾಮ ಪಂಚಾಯತ, ಮನ್ನಳ್ಳಿ ತಾ: ಬೀದರ
09.	ಗೀತಾ ಕೆ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಮಳೆಗಾಂವ ತಾ: ಬೀದರ	ಗ್ರಾಮ ಪಂಚಾಯತ, ಯರನಳ್ಳಿ ತಾ: ಬೀದರ
10.	ವಿಜಯಕುಮಾರ, ಪಂ.ಅ.ಅಧಿಕಾರಿ	ಜಿಲ್ಲಾ ಪಂಚಾಯತ ಬೀದರ	ಗ್ರಾಮ ಪಂಚಾಯತ, ಮಳೆಗಾಂವ ತಾ: ಬೀದರ
11	ಶಶಿಕಪೂರ ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಅಲಿಯಂಬರ ತಾ:ಬೀದರ	ಹೆಚ್ಚುವರಿ ಪ್ರಭಾರ ಗ್ರಾಮ ಪಂಚಾಯತ, ಜಂಬಗಿ ತಾ:ಔರಾದ
12	ಶ್ರೀಮತಿ ಶಿವಲೀಲಾ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಬ್ಯಾಲಹಳ್ಳಿ ತಾ:ಭಾಲ್ಕಿ	ಗ್ರಾಮ ಪಂಚಾಯತ, ಸಿದ್ದೇಶ್ವರ ತಾ:ಭಾಲ್ಕಿ
13	ನಿರ್ಮಲಾ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಜಂಬಗಿ ತಾ:ಔರಾದ	ಗ್ರಾಮ ಪಂಚಾಯತ, ಬಳತ ತಾ:ಔರಾದ

ಸರ್ಕಾರದ ಆದೇಶದಂತೆ ವರ್ಗಾವಣೆ ಮಾಡಲಾದ ಪಂಚಾಯತಿ ಅಭಿವೃದ್ಧಿ ಧಿಕಾರಿಗಳ ವಿವರ

ಕ್ರ. ಸಂ.	ನೌಕರರ ಹೆಸರು/ ಪದನಾಮ	ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತ ಹೆಸರು	ವರ್ಗಾವಣೇ ಮಾಡಿ ಆದೇಶಿಸಿದ ಸ್ಥಳ
1	ಶ್ರೀ. ಈರಪ್ಪಾ ಕನ್ನಾ, ಪಂ.ಅ.ಅಧಿಕಾರಿ.	ಗ್ರಾಮ ಪಂಚಾಯತ, ಉಜಳಂಬ ತಾ:ಬಸವಕಲ್ಯಾಣ	ಗ್ರಾಮ ಪಂಚಾಯತ, ಅಷ್ಟೂರ ತಾ:ಬೀದರ.
2	ಶ್ರೀ. ಪ್ರಭಾಕರ ಕುಲಕರ್ಣಿ ಪಂ.ಅ.ಅಧಿಕಾರಿ.	ಗ್ರಾಮ ಪಂಚಾಯತ, ಮುಧೋಳ(ಬಿ) ತಾ:ಔರಾದ	ಗ್ರಾಮ ಪಂಚಾಯತ, ಅಮಲಾಪೂರ ತಾ:ಬೀದರ
3	ಶ್ರೀ. ಶ್ರೀಧರ, ಪಂ.ಅ.ಅಧಿಕಾರಿ.	ಗ್ರಾಮ ಪಂಚಾಯತ, ಅಮಲಾಪೂರ ತಾ:ಬೀದರ	ಗ್ರಾಮ ಪಂಚಾಯತ ಮಲ್ಕಾಪೂರ ತಾ:ಬೀದರ
4	ಶ್ರೀ. ಶರತಕುಮಾರ ಅಭಿಮಾನ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಭಂಡಾರಕುಮಟಾ ತಾ:ಔರಾದ	ಗ್ರಾಮ ಪಂಚಾಯತ ಅಲಿಯಾಬಾದ(ಜೆ) ತಾ:ಬೀದರ
5	ಶ್ರೀಮತಿ. ವಿಜಯಶೀಲಾ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ರೇಕುಳಗಿ ತಾ:ಬೀದರ	ಗ್ರಾಮ ಪಂಚಾಯತ, ಅಲಿಯಂಬರ ತಾ:ಬೀದರ
6	ಶ್ರೀ. ಶಶಿಕಪೂರ, ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಅಲಿಯಂಬರ ತಾ:ಬೀದರ	ಗ್ರಾಮ ಪಂಚಾಯತ, ರೇಕುಳಗಿ ತಾ:ಬೀದರ
7	ಶ್ರೀಮತಿ ಭಾಗ್ಯಜ್ಯೋತಿ. ಪಂ.ಅ.ಅಧಿಕಾರಿ	ಗ್ರಾಮ ಪಂಚಾಯತ, ಚಾಂದೋರಿ ತಾ:ಔರಾದ	ಗ್ರಾಮ ಪಂಚಾಯತ, ಮನ್ನಾಎಖ್ಖೇಳ್ಳಿ ತಾ:ಹುಮನಾಬಾದ